

ಶ್ರಿಯಾಳಂತಹ ಹುಡಿಗಿಯರು ಈ ಸಮಯದಲ್ಲಿ ಎಂತಹ ಸಂಘರ್ಷಕ್ಕೆ ಗುರಿಯಾಗಿರಬಹುದು ಎನ್ನುವುದನ್ನು ತಿಳಿದ ಡಯಾನಾ, ಶ್ರಿಯಾಳನ್ನು ಬೇಗ ಮಾಡಲು ಒತ್ತಾಯಿಸದೇ ಕಾದುಕೂತಳು.

ಎರಡು ಮೂರು ಸಲ ದೀರ್ಘವಾಗಿ ಉಸಿರೆಳೆದಳು. ಜಾರಿ ಹೋಗುತ್ತಿರುವ ಧೈರ್ಯವನ್ನು ಮತ್ತೆ ಕೂಡಿಟ್ಟುಕೊಂಡಳು. ಜಾರಿ ಹೋಗುವುದೇನೋ ಎಂಬಂತೆ ಮೃದುವಾಗಿರುವ ಶೀಟಿನ ಮೇಲೆ ನಿಂತಿರುವ ಶ್ರಿಯಾಳಲ್ಲಿ ಸಣ್ಣದಾಗಿ ತತ್ತರ. ಒಂದೊಂದು ಬಟ್ಟೆಯನ್ನು ಬಿಚ್ಚುತ್ತಿದ್ದಂತೆಯೇ ಒಂದೊಂದು ನೆನಪು ಅವಳನ್ನು ಅಲುಗಾಡಿಸುತ್ತಿದೆ. ತನ್ನ ಕೈಗಳಿಂದ ತನ್ನನ್ನು ತಾನು ಮುಚ್ಚಿಡಲು ವಿಫಲ ಪ್ರಯತ್ನವನ್ನು ಮಾಡಿದಳು.

ಚಿಕ್ಕ ಕೂದಲು ಕೂಡ ಸ್ಪಷ್ಟವಾಗಿ ಕಾಣಿಸುವಂತಹ ಆ ಬಿಳಿಯ ಶೀಟ್, ಜಾರಿಬಿದ್ದ ಬಟ್ಟೆಗಳನ್ನು ತಬ್ಬಿ ಹಿಡಿಯಿತು.

ಶ್ರಿಯಾಗೆ ಹಾಕಿಕೊಳ್ಳಲು ಹಾಸ್ಪಿಟಲ್ ಡ್ರೆಸ್ ಕೊಟ್ಟು, ಬಿಚ್ಚಿದ ಬಟ್ಟೆಗಳೊಂದಿಗೆ ಆ ಶೀಟನ್ನು ಡಯಾನಾ ಜಾಗ್ರತೆಯಾಗಿ ಮಡಿಚಿಟ್ಟಳು. ಶ್ರಿಯಾಳ ಹೆಸರು, ಬೇರೆ ವಿವರಗಳಿದ್ದ ಲೇಬಲ್‌ಅನ್ನು ಪ್ಯಾಕೆಟ್ ಮೇಲೆ ಅಂಟಿಸಿದಳು.

ಶ್ರಿಯಾಳ ಇಡೀ ಶರೀರವನ್ನು ಪರೀಕ್ಷೆ ಮಾಡಿ ಎಲ್ಲೆಲ್ಲಿ ಗಾಯಗಳಾಗಿವೆಯೋ ಅವುಗಳ ಫೋಟೊ ತೆಗೆದುಕೊಳ್ಳುವುದಾಗಿ ಮತ್ತೊಂದು ಸಲ ಹೇಳಿದಳು ಡಯಾನಾ.

'ಇದು ತಪ್ಪುವುದಿಲ್ಲವೇ?' ಶ್ರಿಯಾಳ ಗಂಟಲಲ್ಲಿ ನೋವು, ಆತಂಕ.

'ಶ್ರಿಯಾ, ನಿಮ್ಮ ಬಾಡಿ ಇಡೀ crime scene ನಂತೆ ಪ್ರತಿಯೊಂದು ಸಣ್ಣ ಭಾಗವನ್ನು ಪರೀಕ್ಷಿಸಿ, ಪ್ರತಿಯೊಂದು ಗಾಯವನ್ನು ಫೋಟೊಗಳನ್ನಾಗಿಸಿ ಜಾಗ್ರತೆಮಾಡಬೇಕು. ನೀವು ಕೇಸ್ ಫೈಲ್ ಮಾಡಿದರೆ, ಇವೇ ಮುಖ್ಯವಾದ ಸಾಕ್ಷ್ಯಗಳು. ರೇಪ್ ನಡೆದ ನಂತರ, ಈ ಪ್ರಾಸೆಸ್ ಎಷ್ಟು ಬೇಗ ಮಾಡಿದರೆ ಅಷ್ಟು ಒಳ್ಳೆಯದು. ನಾನು ತುಂಬಾ ಜೆಂಟಲ್ ಆಗಿ ಮಾಡ್ತೀನಿ. ಪ್ಲೀಸ್ ಕೋ ಆಪರೇಟ್ ವಿಥ್ ಮಿ'.

ಶರೀರದಲ್ಲಿ ಪ್ರತಿಯೊಂದು ಭಾಗವನ್ನು ಡಯಾನಾ ಮುಟ್ಟುತ್ತಿದ್ದರೆ ಮತ್ತೊಂದು ಸಲ ನಾಚಿಕೆಯಿಂದ ಶ್ರಿಯಾ ಮುದುಡಿಕೊಂಡಳು. ಡಯಾನಾ ವಯಸ್ಸು ಮೂವತ್ತರೊಳಗೆ ಇರಬಹುದು. ಪರೀಕ್ಷೆ ಮಾಡಿದಷ್ಟು ಹೊತ್ತು, ಡಯಾನ, ಶ್ರಿಯಾಳ ಸ್ನೇಹಿತಳಂತೆ ನಡೆದುಕೊಳ್ಳುವ ಪ್ರಯತ್ನ ಮಾಡಿದಳು. ಎಷ್ಟು ಮೃದುವಾಗಿ ನಡೆದುಕೊಳ್ಳುತ್ತಿದ್ದರೂ